

ಕೋದಂಡ: ಹೀಗೆ ರಸ್ತೆಯಲ್ಲಿ ನಿಂತು ಭಿಕ್ಷೆ ಬೇಡಲು ನಾಚಿಕೆ ಯಾಗೊಲ್ವೆ?

ಭಿಕ್ಷುಕ: ನೀವು ಹಾಕೋ ಒಂದು ರುಪಾಯಿಗೆ ನಾನು ಕಛೇರಿ ಬೇರೆ ತೆರೀಬೇಕಾ?

★★★

ಸುಬ್ಬು: ಉತ್ತರ ಪತ್ರಿಕೆಯಲ್ಲಿ ಮೊದಲನೇ ವಾಕ್ಯ ಏನು ಬರೆಯಲಿ ಗೆಳೆಯಾ?

ಅಪ್ಪು: ನಾನು ಬರೆದ ಉತ್ತರಗಳು ಕೇವಲ ಕಾಲ್ಪನಿಕ. ಇವುಗಳಿಗೂ ಯಾವ ಪುಸ್ತಕಕ್ಕೂ ಸಂಬಂಧವಿಲ್ಲ. ಯಾರನ್ನೂ ನೋಯಿಸುವ ಉದ್ದೇಶದಿಂದ ಬರೆದವುಗಳಲ್ಲ, ದಯೆ ಇರಲಿ ಅಂತ ಬರೆ!

★★★

ಇನ್‌ಸ್ಪೆಕ್ಟರ್: ನಿನ್ನೆ ನಿಮ್ಮ ಮನೆಗೆ ಕಳ್ಳರು ಬಂದಾಗ ನಿಮ್ಮನೆ ನಾಯಿ ಬೊಗಳಲಿಲ್ಲವೇ?

ವೆಂಕಟ್ರಾವ್: ಅದನ್ನು ಕಳ್ಳರು ಮೊನ್ನೆಯೇ ಎತ್ತಿಕೊಂಡು ಹೋಗಿದ್ದಾರೆ ಸಾರ್!

ಹೆಂಡತಿ: ರ್ರೀ ನಮ್ಮಗ ಇಂದು ಕಾಲೇಜಿಗೆ ಹೋದಂತಿದೆ.

ಗಂಡ: ಹೋಗದೆ ಏನ್ಮಾಡ್ತಾನೆ ಕತ್ತೆ ಬಡವಾ ಇಂದು ಎಲ್ಲಾ ಸಿನಿಮಾ ಮಂದಿರಗಳು ಬಂದ್ ಇವೆ!

★★★

ಚಿಂಟು: ಅಮ್ಮಾ ನದಿಯಲ್ಲಿ ಇಳಿದು ಈಜುತ್ತೇನೆ.

ತಾಯಿ: ಬೇಡ ಕಂದಾ ನದಿಯಲ್ಲಿ ಮೊಸಳೆಗಳಿವೆ.

ಚಿಂಟು: ಮತ್ತೆ ಅಪ್ಪ ಈಜುತ್ತಿದ್ದಾರಲ್ಲ?

ತಾಯಿ: ಡ್ಯಾಡಿ ಇನ್ಶೂರೆನ್ಸ್ ಮಾಡಿಸಿದ್ದಾರೆ, ಅದರ ನಾಮಿನಿ ನಾನೇ!

★★★

ದಾದು: ಏನಯ್ಯಾ ನೂರು ರೂಪಾಯಿಗೆ ಚಿಲ್ರೆ ಇಲ್ಲಾಂದ್ರೆ ಅದಕ್ಯಾಕೆ ಅಷ್ಟು ಸಿಟ್ಟು ಮಾಡ್ಕೋತೀಯಾ?

ವಣಿಜ: ಮತ್ತೆ ಹೊರಗೆ ಚಿಲ್ರೆ ಅಂಗಡಿ ಅಂತ ಬೋರ್ಡ್ ಯಾಕೆ ಹಾಕ್ಬೇಕಿತ್ತು?

★★★

ಗಣಿತ ಶಿಕ್ಷಕ: ನಿಮ್ಮನೇಲಿ ಟಿ.ವಿ.ನೇ ಇಲ್ವಾ?

ಅಪ್ಪಾರಾವ್: ಮೊದಲಿತ್ತು ನನ್ನ ಹೆಂಡ್ತಿಗೆ ಸಿರಿಯಲ್ ಹುಚ್ಚು ಅದಕ್ಕೆ ಮಾರಿಬಿಟ್ಟೆ ಸಾರ್.

ಗಣಿತ ಶಿಕ್ಷಕ: ಒಳ್ಳೆಯದು ಒಳ್ಳೆಯ ಕೆಲಸವನ್ನೇ ಮಾಡಿದ್ದೀರಿ, ಅಂದ ಹಾಗೆ ನಿಮ್ಮ ಹೆಂಡತಿ ಎಲ್ಲಿ? ಮನೆಯಲ್ಲಿ ಕಾಣ್ತಾನೆ ಇಲ್ಲ!

ಅಪ್ಪಾರಾವ್: ಪಕ್ಕದ್ಮನೇಲಿ ಸೀರಿಯಲ್ ನೋಡೋಕೆ ಹೋಗಿದ್ದಾಳೆ!

**(ಸಂಗ್ರಹ) ಕುಬೇರಪ್ಪ ಎಂ.ವಿಭೂತಿ**

## ಶುಗರ್ ಕಮ್ಮೀ...!

ಮೊನ್ನೆ ಸೋಂಪಣ್ಣನಿಗೆ ಯಾರೋ ಫೋನ್ ಮಾಡಿ 'ಸೋಂಪಣ್ಣ. ನಿನ್ನ ಸೇಂಕು ಮಾವ ವೆನ್ಲಾಕ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಅವರಿಗೆ ಶುಗರ್ ತುಂಬಾ ಕಮ್ಮಿಯಾಗಿ ಸೀರಿಯಸ್ ಆಗಿದೆ. ಬಚಾವ್ ಆಗುವುದು ಕಷ್ಟ' ಎಂದರು. ಅದನ್ನು ಕೇಳಿ ಭಯಂಕರ ಟೆನ್ಶನ್ ಆದ ಸೋಂಪಣ್ಣ ತನ್ನ ಕುಟುಂಬದವರಿಗೆಲ್ಲಾ ಫೋನ್ ಮಾಡಿ ವಿಷಯ ತಿಳಿಸಿದ.

ಮಾರನೆಯ ದಿನ ಆಸ್ಪತ್ರೆಯ ಸಿಬ್ಬಂದಿ ಡಿ.ಡಿ.ಟಿ. ಸಿಂಪಡಿಸಬೇಕಾಯಿತು. ಆಸ್ಪತ್ರೆಗೆ ಮುತ್ತಿರುವ ಇರುವೆಗಳನ್ನು ನಿಯಂತ್ರಿಸಲು.

ಯಾಕೆಂದರೆ ಸೇಂಕು ಮಾವನಿಗೆ ಸಕ್ಕರೆ ಕಮ್ಮಿಯಾಗಿರುವುದು ಗೊತ್ತಾಗಿ ಹಿಂದಿನ ದಿನ ಅವನ ಕುಟುಂಬದವರೆಲ್ಲಾ ಸೇಂಕುವಿಗೆ ತಿನ್ನಿಸಲು ಗೋಣಿಗಟ್ಟಲೆ ಸಕ್ಕರೆ ಮತ್ತು ಬೆಲ್ಲವನ್ನು ಎತ್ತಿಕೊಂಡು ಆಸ್ಪತ್ರೆಗೆ ಹೋಗಿದ್ರು.

## ನೀವು ಸಿಂಗಲ್ಲಾ?

ತುಂಬಾ ಜನಸಂದಣಿಯಿರುವ ಉಪಾಹಾರಗೃಹದಲ್ಲಿ ಸೋಂಪ ಒಬ್ಬನೇ ಒಂದು ಟೇಬಲಿನಲ್ಲಿ ಚಾ ಕುಡಿಯುತ್ತಿದ್ದ. ಅದನ್ನು ನೋಡಿದ ಒಬ್ಬಳು ಸುರಸುಂದರಾಂಗಿ ಅವನ ಹತ್ತಿರ ಬಂದು 'ರೀ, ನೀವು ಸಿಂಗಲ್ಲಾ?' ಎಂದು ಕೇಳಿದಳು. ಅವಳನ್ನು ನೋಡಿ ಸೋಂಪ ಹಲ್ಲು ಕಿರಿಯುತ್ತಾ ಎದ್ದುನಿಂತು 'ಹುಂ, ಹೌದು, ನೀವು?' ಎಂದು ಆಸೆಯಲ್ಲಿ ಕೇಳಿದ.

ಅದಕ್ಕೆ ಆಕೆ 'ನಾವು ಐದು ಮಂದಿಯಿದ್ದೇವೆ ಮಾರ್‍ರೆ. ಕುರ್ಚಿ ಒಂದು ಬೇಕಿತ್ತು. ಅದಕ್ಕೆ ನಿಮ್ಮೆದುರಿಗಿರುವ ಕುರ್ಚಿ ತೆಗೆದುಕೊಳ್ಳುತ್ತೇನೆ ಆಯ್ತಾ' ಎಂದು ಎದುರಿಗಿರುವ ಟೇಬಲಿಗೆ ಕುರ್ಚಿ ಎತ್ತಿಕೊಂಡು ಹೋದಳು.

**(ಸಂಗ್ರಹ) ರಮೇಶ್ ಶೆಟ್ಟಿಗಾರ್**




ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460